ಭಾವ ಹುಟ್ಟಿಕೊಂಡಿತು. ಪ್ರಭುದೇವ ಅವರ ಕಾದಂಬರಿಗಳು ನೆನಪಾದವು. ಮನುಷ್ಯ ಸ್ವಭಾವದ ಹಲವು ಮುಖಗಳನ್ನು ಕಾದಂಬರಿಗಳ ವಿಲಕ್ಷಣ ಪಾತ್ರಗಳ ಮೂಲಕ ಓದುಗರಿಗೆ ಕಟ್ಟಿ ಕೊಟ್ಟ ಲೇಖಕ ಮರೆವು ರೋಗಿ ಅಂದರೆ ನಂಬೋದು ಕಷ್ಟ. ಅವರು ಸೃಷ್ಟಿಸಿದ ಪಾತ್ರಗಳು. ಜನ ಮರೆತ ಹತ್ತಾರು ಐತಿಹಾಸಿಕ ಸಂಗತಿಗಳನ್ನು ಭಾಷಣಗಳು, ಲೇಖನಗಳ ಮೂಲಕ ಹೇಳಿ, ಬರೆದು ಜಾಗೃತಗೊಳಿಸಿದ ಪ್ರೊಫೆಸರ್ ಮರೆವು ರೋಗಿಯೇ? ಪ್ರಭುದೇವ ಮರೆವು ರೋಗಿ ಅನ್ನೋದು ಗೊತ್ತಾದರೆ ಸಾಹಿತ್ಯ ಲೋಕದ ಪ್ರತಿಕ್ರಿಯೆ ಹೇಗಿರಬಹುದು ಎಂದು ಮೃತ್ಯುಂಜಯ ಯೋಚಿಸಿದ.

ಪರಮಸುಖಿ ಕಾದಂಬರಿಯ ನಾಯಕ ನೆನಪಾದ. ಅವನೂ ಮರೆವು ರೋಗಿ! ವಿಮರ್ಶಕರ ವಲಯದಲ್ಲಿ ಅದರ ಬಗ್ಗೆ ದೊಡ್ಡಮಟ್ಟದಲ್ಲಿ ಚರ್ಚೆಯಾಗಿತ್ತು. ಒಂದೆರಡು ಸಾಹಿತ್ಯದ ಪತ್ರಿಕೆಗಳು ಪ್ರಭುದೇವ ಅವರೇ ಕಾದಂಬರಿಯ ನಾಯಕ ಎಂದು ತಮಾಷೆ ಮಾಡಿದ್ದವು! ಆ ತಮಾಷೆ ನಿಜವಾಯ್ತಲ್ಲ ಎಂದು ಮೃತ್ಯುಂಜಯನಿಗೆ ಅನ್ನಿಸಿತು.

ಪ್ರಭುದೇವ ಜೀವನದ ಉದ್ದಕ್ಕೂ ಹೋರಾಟ ಮಾಡಿಕೊಂಡೇ ಬಂದವರು. ಬಾಲ್ಯದ ಬಡತನ ಅವರ ಕಾದಂಬರಿಗಳಲ್ಲಿ ಅನಾವರಣಗೊಂಡಿದೆ. ಅವರ ಬಗ್ಗೆ ಹುಟ್ಟಿಕೊಂಡ ಗಾಸಿಪ್‌ಗಳು ಒಂದೆರಡಲ್ಲ! ಟೀಕೆಗಳಿಗೆ ಅವರದು ನಿರ್ಲಿಪ್ತ ಮನಸ್ಥಿತಿಯೇ ಉತ್ತರವಾಗಿತ್ತು. ಆಂಧ್ರ, ತೆಲಂಗಾಣ, ಒರಿಸ್ಸಾ, ಛತ್ತೀಸ್‌ಗಢ, ನೇಪಾಳದ ಗಡಿಗಳಲ್ಲಿ ನೆಲೆಯೂರಿದ ಪಾತಕಲೋಕವನ್ನು ಕಣ್ಣಾರೆ ಕಂಡು ಬರೆದ ಅಲೆಮಾರಿ ಕಾದಂಬರಿಯ ಪ್ರತಿ ಪುಟವೂ ರೋಚಕ. ಒಡಿಶಾದ ಜನರ ಬಡತನ, ಬಿಹಾರದ ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆ. ಉತ್ತರ ಭಾರತದ ಭೂಮಾಲೀಕರ ದಬ್ಬಾಳಿಕೆಗೆ ನಲುಗಿದ ಬಡವರ ಬವಣೆಗಳನ್ನು ಕಟ್ಟಿಕೊಡುವ ಅವರ ಮಹಾಪ್ರಸ್ಥಾನ ಕಾದಂಬರಿಯೂ ಅಷ್ಟೇ. ಎಲ್ಲ ಕಾದಂಬರಿಗಳಲ್ಲೂ ಜನ ಸಾಮಾನ್ಯರ ಬದುಕು ಹರಳುಗಟ್ಟಿತ್ತು.

ಪ್ರಭುದೇವರ ಕಾದಂಬರಿಗಳ ವಸ್ತು ಕಾಲ್ಪನಿಕ ಎಂಬ ಟೀಕೆಗಳಿದ್ದವು. ಕಲ್ಪಿಸಿಕೊಂಡು ರೋಚಕವಾಗಿ ಬರೆಯುವ ಶಕ್ತಿ ಅವರಿಗೆ ಒಲಿದಿದೆ ಎಂದು ಪ್ರಮುಖ ವಿಮರ್ಶಕರೊಬ್ಬರು ಹೇಳಿದ್ದರು!

'ಪ್ರಭುದೇವರ ಮಾತುಗಳೂ ಅಷ್ಟೇ. ಕಾದಂಬರಿ, ಲೇಖನ, ಭಾಷಣಗಳಲ್ಲಿ ವ್ಯಕ್ತವಾಗುವ ಪ್ರತಿಭಟನೆ, ಬಂಡಾಯ ಮನಸ್ಥಿತಿ ಎಲ್ಲವೂ ಹುಸಿ....' ಎಂದವರೂ ಇದ್ದರು. ಆದರೆ ಪ್ರಭುದೇವ ಅವರನ್ನು ನಮ್ಮ ಕಾಲದ ಪ್ರಬುದ್ಧ ಲೇಖಕ ಎಂದು ಸಾಹಿತ್ಯಲೋಕ ಒಪ್ಪಿಕೊಂಡಿತ್ತು. ಪ್ರಭುದೇವರ ಬಗ್ಗೆ ಏನೇ ಹೇಳಿದರೂ ಓದುಗರು ತಲೆಕೆಡಿಸಿಕೊಳ್ಳಲಿಲ್ಲ! ಸಾವಿರಾರು ಜನ ಅವರ ಕಾದಂಬರಿಗಳನ್ನು ಓದಿದರು. ಅವರ ಬಗ್ಗೆ ಆರಾಧನಾ ಭಾವವನ್ನು ಬೆಳೆಸಿಕೊಂಡಿದ್ದರು.

ಅವರ ಚಂದ್ರಚೂಡ, ಅವಸಾನ, ಬಹುಮುಖಿ, ಕಾಲ್‌ಗರ್ಲ್, ಡಾನ್, ದೇವರ ಮಕ್ಕಳು, ಎರಡು ತಲೆಯ ಮನುಷ್ಯ, ಪ್ರಳಯಾಗ್ನಿ, ಅಗ್ನಿಪಥ ಇತ್ಯಾದಿ ಕಾದಂಬರಿಗಳು ಹಲವು ಮುದ್ರಣಗಳನ್ನು ಕಂಡು ಸಾವಿರಾರು ಓದುಗರನ್ನು ತಲುಪಿವೆ. ಈ ಕಾದಂಬರಿಗಳನ್ನು ಬರೆದವನು ನಾನು ಅನ್ನೋದು ಪ್ರಭುದೇವ ಅವರಿಗೆ ನೆನಪೇ ಆಗದಿದ್ದರೆ ಏನಾಗಬಹುದು? ಎಂದು ಮೃತ್ಯುಂಜಯ ಯೋಚಿಸಿದ.

ಪ್ರಭುದೇವರಿಗೆ ನಾಲ್ಕು ವಿಶ್ವ ವಿದ್ಯಾನಿಲಯಗಳು ಗೌರವ ಡಾಕ್ಟರೇಟ್ ಕೊಟ್ಟಿದ್ದವು. ಅವರಿಗೆ ಪ್ರಶಸ್ತಿಗಳು ಬಂದಾಗ ಅವರ ಅವರ ಶಿಷ್ಯರು, ಓದುಗರು ತಮಗೇ ಬಂದಂತೆ ಸಂಭ್ರಮಿಸಿದ್ದರು. ಜಾತಿ ವ್ಯವಸ್ಥೆಯನ್ನು ಕಟುವಾಗಿ ವಿರೋಧಿಸುತ್ತಿದ್ದ ಪ್ರಭುದೇವ ತುಳಿತಕ್ಕೆ ಒಳಗಾದವರ ವಕ್ತಾರನಂತೆ ನಡೆದುಕೊಂಡರು. ಎಲ್ಲೇ ದೌರ್ಜನ್ಯ ನಡೆದರೂ ಅದರ ವಿರುದ್ಧ ಧ್ವನಿ ಎತ್ತಿದರು. ಅವರ ಒಂದು ಕರೆಗೆ ಸಾವಿರಾರು ಜನ ಸ್ಪಂದಿಸುತ್ತಿದ್ದರು. ಸಾರ್ವಜನಿಕ ಹಿತಾಸಕ್ತಿಯನ್ನು ಎತ್ತಿ ಹಿಡಿಯುವ ವಿಷಯದಲ್ಲಿ ಸದಾ ಮುಂದಿರುತ್ತಿದ್ದ ಪ್ರಭುದೇವ ಅವರು ಈಗ ಸಾರ್ವಜನಿಕ ಬದುಕಿನಿಂದ ದೂರ ಉಳಿಯುವ ಸಂದರ್ಭವನ್ನು ಊಹಿಸಿಕೊಳ್ಳಲೂ ಮೃತ್ಯುಂಜಯನಿಗೆ ಆಗಲಿಲ್ಲ.

'ಸರ್,ನಿಮ್ಮ ಮರೆವಿನ ಸಮಸ್ಯೆ ಕುರಿತು ಯಾರಿಗೂ ಹೇಳಬೇಡಿ. ಆತ್ಮಕಥೆ ಬರೆಯುತ್ತಿದ್ದೇನೆ, ನನ್ನ ಭೇಟಿಗೆ ಯಾರೂ ಬರಬಾರದು. ಫೋನೂ ಮಾಡಬಾರದು...' ಎಂದು ಪತ್ರಿಕಾ ಹೇಳಿಕೆ ಕೊಟ್ಟು, ಕೆಲವು ದಿನ ಎಲ್ಲರಿಂದ ದೂರ ಇರಿ. ಅಲ್ಝೈಮೈರ್‌ಗೆ ಎಲ್ಲಿ ಉತ್ತಮ